ಬಟ್ಟಲಲ್ಲದೆ, ನನ್ನ ವಿರೋಧಿಗಳಿಗೆ ನಾನು ಕೊಡಬಹುದಾದ ವಸ್ತು ಎಂದರೆ ಬೇರೆ ಏನೂ ಇಲ್ಲ. ಆ ಪ್ರೇಮದ ಬಟ್ಟಲನ್ನು ನೀಡುತ್ತಾ ಅವರನ್ನು ನನ್ನ ಹತ್ತಿರಕ್ಕೆ ಸೆಳೆದುಕೊಳ್ಳುವುದು' ಎಂಬ ಗಾಂಧೀಜಿ ಅವರ ಈ ಮಾತುಗಳು ಪೀರ್ ಬಾಷಾ ಮೇಲೆ ಅಪಾರವಾದ ಪರಿಣಾಮವನ್ನು ಬೀರಿತ್ತು. ಹೀಗಾಗಿಯೇ ಅವರು ತಮ್ಮನ್ನು ಬಂಧಿಸಿದವರ ಮೇಲೆ ಎಂದೂ ಕೋಪಗೊಳ್ಳಲಿಲ್ಲ! ಅವರನ್ನು ಕುರಿತು ಎಂದೂ ಕಹಿ ಮಾತನ್ನು ಆಡಲಿಲ್ಲ! ಕೊನೆಗೆ ದೇಶದ ವಿಮೋಚನೆಗಾಗಿ ತಮ್ಮ ಬಡಕುಟುಂಬದ ಬದುಕನ್ನೇ ಮೀಸಲಾಗಿಟ್ಟರು. ಒಂದು ದಿನ ಗೌರಿಬಿದನೂರಿನ ಕಡೆ ನಡೆಯುತ್ತಿದ್ದ ಹೆಂಡ ವಿರೋಧ ಚಳವಳಿಯಲ್ಲಿ ಪಾಲ್ಗೊಂಡರು. ಚಳವಳಿಯ ಸಂದರ್ಭದಲ್ಲಿ ಯಾವುದೋ ಒಂದು ಈಚಲು ವನದ ನಡುವೆ ಪೊಲೀಸರ ಗುಂಡಿಗೆ ಬಲಿಯಾದರು. ಒಂದು ದೊಡ್ಡ ಆದರ್ಶಕ್ಕಾಗಿ ತಮ್ಮ ಬದುಕನ್ನೇ ಬಲಿಗೊಟ್ಟು ಹುತಾತ್ಮರಾದ ಪೀರ್ ಬಾಷಾ ಚರಿತ್ರೆಯಲ್ಲೂ ಅನಾಮಿಕರಾಗಿಯೇ ಉಳಿದರು. ದೇಶ ವಿಮೋಚನೆಗಾಗಿ ರಕ್ತ ಹರಿಸಿದವರಲ್ಲಿ ಖಲಂದರ್ ಸಾಹೇಬರ ರಕ್ತವೂ ಸೇರಿಕೊಂಡಿದೆ ಎನ್ನುವುದನ್ನು ಈಗಿನ 'ದೇಶಪ್ರೇಮಿ'ಗಳು ಮರೆತಿದ್ದಾರೆ! ವಾರಸುದಾರರು ಯಾರೂ ಇಲ್ಲ ಎಂದು ಪೊಲೀಸರೇ ಅವರ ಶವವನ್ನು ದಫನ್ ಮಾಡಿದರಂತೆ! ಬಡತನವಲ್ಲದೆ ಬೇರೇನೂ ಗತಿ ಇಲ್ಲದ ಅವರ ಕುಟುಂಬ ಬಾಷಾ ಅವರ ಸಾವಿನಿಂದ ತತ್ತರಿಸಿಹೋಯಿತು. ಬಾಷಾ ಅವರ ಪತ್ನಿ ಈ ಕೊರಗಿನಲ್ಲೇ ಹಾಸಿಗೆ ಹಿಡಿದು ಕೊನೆಗೊಂದು ದಿನ ಅವರೂ ಇಲ್ಲವಾದರು. ಇವರ ಕುಟುಂಬ ಅಕ್ಷರಶಃ ಬೀದಿಪಾಲಾಯಿತು. ಆಗ ಇವರ ದೂರದ ಸಂಬಂಧಿಯೊಬ್ಬರು ಸಣ್ಣವರಾಗಿದ್ದ ಈ ಇಬ್ಬರನ್ನೂ ಬಳ್ಳಾರಿ ತೊರೆದು ಈ ಕಡೆಗೆ ಕರೆದುಕೊಂಡುಬಂದರಂತೆ! ದಾರುಣವೆನಿಸುವ ತಮ್ಮ ಹತಭಾಗ್ಯ ಕುಟುಂಬದ ದುರಂತವನ್ನು ವಿವರಿಸುವಾಗ ಖಲಂದರ್ ಅವರ ಕಣ್ಣುಗಳು ನೀರಿನಲ್ಲಿ ಮುಳುಗಿದ್ದವು. ಅವರು ಹೀಗೆ ಕಣ್ಣೀರು ಸುರಿಸುವುದು ನನಗೆ ಸಹಜವೆನಿಸಿತು, ಏಕೆಂದರೆ ದುಃಖವನ್ನು ಜ್ವಾಲಾಮುಖಿಯಂತೆ ಒಳಗಿಟ್ಟುಕೊಳ್ಳದೆ ಹೊರಹಾಕುವುದೇ ಹೃದಯದ ಭಾರವನ್ನು ಹಗುರಗೊಳಿಸಿಕೊಂಡಂತೆ! 'ಎದೆಗೆ ಅವಮಾನವಾದೀತು, ಹೃದಯ ಹತ್ತಿ ಉರಿಯದಿದ್ದರೆ; ಹೃದಯಕ್ಕೆ ಅವಮಾನವಾದೀತು, ಪ್ರತೀ ಉಸುರಿಗೂ ಬೆಂಕಿ ಉರಿಯದಿದ್ದರೆ'. ಅವರ ಕುಟುಂಬದ ರುದ್ರಕಥನವನ್ನು ಕೇಳಿ ನನ್ನೊಳಗೆ ನೋವಿನ ನದಿಯೊಂದು ಹರಿದಾಡತೊಡಗಿತು.

ನನ್ನ ಸುತ್ತಲೂ ರಕ್ತದ ಮಹಾಸಾಗರ ಮಂಥನ
ಅಯ್ಯೋ ಇಷ್ಟೇ ಆಗಿದ್ದರೆ ಎಷ್ಟು ಚೆನ್ನಾಗಿರುತ್ತಿತ್ತು!
ಭವಿಷ್ಯ ಇನ್ನೂ ತೆರೆದುತೋರಿಸಲಿದೆ
ನಾನು ನೋಡಲು ಇನ್ನೂ ಬಾಕಿ
ಉಳಿದಿರುವುದನ್ನೆಲ್ಲಾ!

ಜೊತೆಗೆ ಅಗಾಧವಾದ ಕಾವ್ಯ ಪ್ರೇಮಿಯೂ ಆಗಿದ್ದ ಪೀರ್ ಬಾಷಾ ತಮಗೆ ಇಷ್ಟವಾಗಿದ್ದ ಗಾಲಿಬ್ ಅವರ ಸಾಲುಗಳನ್ನು ಯಾವಾಗಲೂ ಹೇಳುತ್ತಿದ್ದರಂತೆ! ತಂದೆಯವರಲ್ಲಿದ್ದ ಹಾಡುಗಾರಿಕೆಯ ಕಂಠವನ್ನು ಖಲಂದರ್ ಮತ್ತು ಪೀರ್ ದಾ ಅವರು ಬಳುವಳಿಯಾಗಿ ಪಡೆದಿದ್ದರು.

ನನ್ನ ಎಳವೆಯ ಕಣ್ಣುಗಳಲ್ಲಿ ನೋಡಿದಂತೆ, ಪ್ರತಿ ಜುಮ್ಮಾ (ಶುಕ್ರವಾರ) ದಿನದ ಸಂಜೆ ಪೀರ್ ದಾ ಅವರ ಮನೆಯ ಹೊರ ಜಗುಲಿಯ ಮೇಲೆ ಈ ಅಣ್ಣ-ತಮ್ಮಂದಿರ ಹಾಡುಗಾರಿಕೆಯ ಜುಗಲ್‌ಬಂದಿ ನಡೆಯುತ್ತಿತ್ತು. ಜನತೆಯ ನಡುವೆ ಬಾಳಿ ಬದುಕಿದ ಗಾಲಿಬ್, ಕಬೀರ, ಶರೀಫ, ಕಡಕೋಳು ಮಡಿವಾಳಪ್ಪ, ಶಂಕರಾನಂದರು, ದಾಸ ಕವಿಗಳು ಹೀಗೆ ಅನೇಕ ಕವಿಗಳ ರಚನೆಯೂ ಇದರೊಡನೆ ಸೇರಿಹೋಗಿರುತ್ತಿದ್ದವು. ಕೇಳಲು ಬಂದ ಹಿರಿಯರಿಗೆ ಚಹಾ ಸೇವನೆ, ಕಲ್ಲುಸಕ್ಕರೆ ತುಂಡುಗಳನ್ನು ಅವರ ಕುಟುಂಬದ ಗೌರವಾನ್ವಿತ ಸದಸ್ಯರು ಧಾರಾಳವಾಗಿ ಕೊಡುತ್ತಿದ್ದರು. ಎಲ್ಲರಿಗೂ ಮುಕ್ತ ಆಹ್ವಾನವಿದ್ದ ಈ ಗೋಷ್ಠಿಗೆ ನಾನೂ ಅನೇಕ ಸಲ ಕಲ್ಲುಸಕ್ಕರೆಯ ಆಸೆಗಾಗಿ ಹೋಗಿದ್ದೇನೆ! 'ಸಂಗೀತ ಎನ್ನುವುದು ಸ್ವರ್ಗದ ಬಾಗಿಲಿನ ಕೀಲಿ ಕೈ' ಎಂದು ಹೇಳಿದ ಮಹಾನುಭಾವರ ಮಾತುಗಳು ನೆನಪಾಗುತ್ತಿದೆ.

ಈ ಸಹೋದರರ ಗಾಯನದಿಂದಾಗಿಯೇ ನಮ್ಮ ಕೇರಿಯಲ್ಲಿ ಸದಭಿರುಚಿಯ ಮತ್ತು ಭೇದ ಭಾವಗಳಿಲ್ಲದ ತಂಗಾಳಿ ಬೀಸುತ್ತಿತ್ತು. ಸಂಜೆ ಇಳಿದು ಕತ್ತಲಾಗುತ್ತಿದ್ದಂತೆ